# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 312 |
| ಸದಸ್ಯರ ಹೆಸರು | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | ಮುಖ್ಯಮಂತ್ರಿ |
| ಉತ್ತರದ ದಿನಾಂಕ | 12-07-2018 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮಠಮಾನ್ಯಗಳ ಅಕ್ಕಪಕ್ಕದಲ್ಲಿ ಶಾಲಾ ಕಾಲೇಜುಗಳ ಹತ್ತಿರದಲ್ಲಿ, ಸಾರ್ವಜನಿಕ ಆಸ್ಪತ್ರೆಗಳ ಸಮೀಪದಲ್ಲಿ ಎಂ.ಎಸ್.ಐ.ಎಲ್ ವತಿಯಿಂದ ತೆರೆದ ಮದ್ಯದಂಗಡಿಗಳಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರ ಪ್ರಕಾರ ಎಂ.ಎಸ್.ಐ.ಎಲ್ ವತಿಯಿಂದ ಮದ್ಯದಂಗಡಿಯನ್ನು ತೆರೆಯಲು ಕ್ರಮ ವಹಿಸಲಾಗುತ್ತಿದೆ. |
| ಆ) | ಹಾಗಿದ್ದಲ್ಲಿ, ಸದರಿ ಮದ್ಯದಂಗಡಿಗಳನ್ನು ತೆರೆಯಲು ಸರ್ಕಾರವು ರೂಪಿಸಿರುವ ನಿಯಮಾವಳಿಗಳೇನು; (ವಿವರ ನೀಡುವುದು) | ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3 (11-ಸಿ), ನಿಯಮ 8, ನಿಯಮ 8 ಎ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಸನ್ನದು ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು. |
| ಇ) | ಗದಗ ಮಹಾನಗರದ ಜಗದ್ಗುರು ತೋಂಟದಾರ್ಯ ಮಠದ ಹತ್ತಿರವಿರುವ ಮದ್ಯದಂಗಡಿಯಿಂಥ ಸಾರ್ವಜನಿಕರಿಗೆ ತೀವ್ರ ತೊಂದರೆಯಿಂದಾಗಿ ಕಳೆದ 15 ದಿನಗಳಿಂದ ಪ್ರತಿಭಟನೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಈ) | ಹಾಗಿದ್ದಲ್ಲಿ, ಈಗಾಗಲೇ ಮೇಲೆ ತಿಳಿಸಿರುವ ಸಾರ್ವಜನಿಕ ಸ್ಥಳಗಳ ಬಳಿ ಹಾಗೂ ಮಠ ಮಾನ್ಯಗಳ ಬಳಿ ತೆರೆದಿರುವ ಮದ್ಯದಂಗಡಿಗಳನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು) | ಗದಗ ಮಹಾನಗರದ ಜಗದ್ಗುರು ತೋಂಟದಾರ್ಯ ಮಠದ ಹತ್ತಿರವಿರುವ ಈ ಕೆಳಕಂಡ ಸನ್ನದುಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಸಂಬಂಧ 2016-17 ನೇ ಸಾಲಿನ ಸನ್ನದು ನವೀಕರಣ ಸಂದರ್ಭದಲ್ಲಿ ತಿರಂಗಾ ಯುವ ಮೋರ್ಚಾ ಸೇವಾ ಸಮಿತಿ ಸಾ:ಗದಗ, ಇವರು ದೂರು ಅರ್ಜಿ ಸಲ್ಲಿಸಿದ್ದರು.<br>1. ಮೆ:ಸುಪ್ರಿಯಾ ಹೋಟೆಲ್, ಸಿಎಲ್-7 ಸನ್ನದು.<br>2. ಮೆ:ಪ್ರಶಾಂತ್ ಲಾಡ್ಜ್, ಸಿಎಲ್-7 ಸನ್ನದು.<br>3. ಮೆ:ರಾಜ್‌ಕಮಲ್ ವೈನ್ಸ್, ಸಿಎಲ್-2 ಸನ್ನದು.<br>4. ಮೆ:ಪಾಪ್ಯುಲರ್ ಬ್ರಾಂಡಿ ಶಾಪ್, ಸಿಎಲ್-2 ಸನ್ನದು.<br>5. ಮೆ:ಪವಿತ್ರ ಬಾರ್ ಅಂಡ್ ರೆಸ್ಟೋರೆಂಟ್, ಸಿಎಲ್-9 ಸನ್ನದು.<br>6. ಮೆ:ಕ್ಲಾಸಿಕ್ ಬಾರ್, ಸಿಎಲ್-9 ಸನ್ನದು. |

ಸದರಿ ದೂರಿನ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಸಾರ್ವಜನಿಕರಿಗೆ ತೊಂದರೆಗಳಾಗುವುದರಿಂದ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು. 1967 ರ ನಿಯಮ 5(4)(ಎ) ರ ಪ್ರಕಾರ ಸನ್ನದುಗಳನ್ನು ಸ್ಥಳಾಂತರ ಮಾಡಿಕೊಳ್ಳಲು ಆದೇಶಿಸಿದ್ದರು.

ಸನ್ನದುದಾರರು ಜಿಲ್ಲಾಧಿಕಾರಿಗಳ ಆದೇಶವನ್ನು ಪ್ರಶ್ನಿಸಿ ಅಬಕಾರಿ ಆಯುಕ್ತರ ಮೇಲ್ಮನವಿ ಪ್ರಾಧಿಕಾರದಲ್ಲಿ ಆರು ಪ್ರತ್ಯೇಕ ಮೇಲ್ಮನವಿಗಳನ್ನು ಸಲ್ಲಿಸಿರುತ್ತಾರೆ. ವಿವರಗಳು ಈ ಕೆಳಗಿನಂತಿರುತ್ತದೆ.

| ಕ್ರ ಸಂ. | ಸನ್ನದುದಾರರ ಹೆಸರು | ಅಬಕಾರಿಆಯುಕ್ತರ ಮೇಲ್ಮನವಿ ಸಂಖ್ಯೆ |
|---|---|---|
| 1 | ಮೆ:ಪಾಪ್ಯುಲರ್ ಬ್ರಾಂಡಿ ಶಾಪ್, ಸಿಎಲ್-2 ಸನ್ನದುದಾರರು | ECS/32/APP/2017 |
| 2 | ಮೆ:ಪವಿತ್ರ ಬಾರ್ ಅಂಡ್ ರೆಸ್ಟೋರೆಂಟ್. ಸಿಎಲ್-9 ಸನ್ನದುದಾರರು. | ECS/31/APP/2017 |
| 3 | ಮೆ:ಕ್ಲಾಸಿಕ್ ಬಾರ್, ಸಿಎಲ್-9 ಸನ್ನದುದಾರರು | ECS/34/APP/2017 |
| 4 | ಮೆ:ಸುಪ್ರಿಯಾ ಹೋಟೆಲ್, ಸಿಎಲ್-7 ಸನ್ನದುದಾರರು. | ECS/35/APP/2017 |
| 5 | ಮೆ:ಪ್ರಶಾಂತ್ ಲಾಡ್ಜ್, ಸಿಎಲ್-7 ಸನ್ನದುದಾರರು. | ECS/41/APP/2017 |
| 6 | ಮೆ:ರಾಜ್‌ಕಮಲ್ ವೈನ್ಸ್, ಸಿಎಲ್-2 ಸನ್ನದುದಾರರು | ECS/33/APP/2017 |

ಅಬಕಾರಿ ಆಯುಕ್ತರ ಮೇಲ್ಮನವಿ ಪ್ರಾಧಿಕಾರವು ಮೇಲಿನ ಕ್ರ.ಸಂ. 1 ರಿಂದ 3 ರಲ್ಲಿನ ಮೇಲ್ಮನವಿಗಳನ್ನು ಪುರಸ್ಕರಿಸಿ ದಿನಾಂಕ: 11-01-2018 ರ ಆದೇಶದಲ್ಲಿ ಜಿಲ್ಲಾಧಿಕಾರಿಯವರ ಸ್ಥಳಾಂತರ ಆದೇಶವನ್ನು "Set Aside" ಮಾಡಿ, ಸನ್ನದಿನ ಅವಧಿಯನ್ನು ನಿಯಮಾನುಸಾರ ವಿಸ್ತರಿಸಲು ಆದೇಶಿಸಿತು. ಆದ್ದರಿಂದ, ಈ 3 ಸನ್ನದುಗಳ ಅವಧಿಯನ್ನು ಜಿಲ್ಲಾಧಿಕಾರಿಗಳು, ಗದಗ ಇವರು ದಿನಾಂಕ:30-06-2018 ರವರೆಗೆ ವಿಸ್ತರಿಸಿ ಆದೇಶಿಸಿರುತ್ತಾರೆ.

ಅಬಕಾರಿ ಆಯುಕ್ತರ ಮೇಲ್ಮನವಿ ಪ್ರಾಧಿಕಾರವು ಕ್ರ. ಸಂ.1 ರಿಂದ 3 ರಲ್ಲಿನ ಮೇಲ್ಮನವಿಗಳಲ್ಲಿ ಜಿಲ್ಲಾಧಿಕಾರಿಗಳ ಆದೇಶವನ್ನು "Set Aside" ಮಾಡಿರುವ ಹಿನ್ನೆಲೆಯಲ್ಲಿ ಹಾಗೂ ಕ್ರ. ಸಂ. 4 ರಿಂದ 6 ರಲ್ಲಿನ ಮೇಲ್ಮನವಿಗಳು ವಿಚಾರಣೆ ಹಂತದಲ್ಲಿದ್ದು, ಜಿಲ್ಲಾಧಿಕಾರಿಗಳ ಸ್ಥಳಾಂತರ ಆದೇಶದ ವಿರುದ್ಧ ಅಬಕಾರಿ ಆಯುಕ್ತರ ಮೇಲ್ಮನವಿ ಪ್ರಾಧಿಕಾರ ತಡೆಯಾಜ್ಞೆ ನೀಡಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ಗದಗ ಇವರು ಮೇಲಿನ 6 ಸನ್ನದುಗಳನ್ನು 2018-19ನೇ ಸಾಲಿಗೆ ನವೀಕರಿಸಿರುತ್ತಾರೆ.

ಆಇ 51 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ